ದಿನಾಂಕ 18 ನೇ ಏಪ್ರಿಲ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :</u> ಪ್ರತಿವಾದಿಪರ ವಕೀಲರಿಂದಃ-

ನಾನು ಈ ದಾವೆಯಲ್ಲಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬೆಂಗಳೂರಿಗೆ ಹೋಗಿ ತಯಾರಿಸಿರುತ್ತೇನೆ. ಸಾಕ್ಷಿ ಅಸಲು ದಾವೆ 148/15 ನ್ನು ಪ್ರತಿವಾದಿ ವಿರುದ್ಧ ಸಲ್ಲಿಸಿದ್ದೆ ಎಂದು ಒಪ್ಪಿದ ಮೇರೆಗೆ ವಾದ ಪತ್ರವನ್ನು ನಿ ಡಿ 1 ಎಂದು ಗುರುತಿಸಲಾಯಿತು. ನಿ ಡಿ 1 ವಾದ ಪತ್ರವನ್ನು ಓದಿ ಸರಿ ಇದೆ ಎಂದು ಒಪ್ಪಿ ಸಹಿ ಮಾಡಿದ ನಂತರ ಸಲ್ಲಿಸಲಾಗಿದೆ ಎಂದರೆ ಸರಿ . ಸದರಿ ದಾವೆಯನ್ನು ನಾನು ಜಿ.ಪಿ. ಎ ಹೋಲ್ಡರ್ ಆಗಿ ಸಲ್ಲಿಸಿದ್ದೇನೆ ಎಂದರೆ ಸರಿ . ಪ್ರತಿವಾದಿ 1 ರವರು ಕ್ರಯಪತ್ರವನ್ನು ನಕಲು ಮಾಡಿದ್ದಾರೆ ಎಂದು ಈ ದಾವೆ ಸಲ್ಲಿಸಿದ್ದೇನೆ. ಪ್ರತಿವಾದಿ 30.04.1996 ರಲ್ಲಿ ಕ್ರಯ ಪತ್ರ ಮಾಡಿಕೊಂಡಿದ್ದಾರೆ. ಸದರಿ ಕ್ರಯ ಪತ್ರ ಮಾಡಿದ ಸಮಯದಲ್ಲಿ ನಾನು ಹಾಜರಿರಲಿಲ್ಲ. 1996 ರಲ್ಲಿ ನಾನು ಬೆಂಗಳೂರಿನಲ್ಲಿ ಇದ್ದೆ. ನನ್ನ ತಂದೆ ವಯಸ್ಸಿಗೆ ಬಂದ ನಂತರ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಇದ್ದರು ನಾನು ಸಹ ಅಲ್ಲೇ ಇದ್ದೆ ಎನ್ನುತ್ತಾರೆ ಯಾವ ವರ್ಷ ದಿಂದ ನನ್ನ ತಂದೆ ಬೆಂಗಳೂರಿನಲ್ಲಿ ಇದ್ದರೂ ಎಂದು ನನಗೆ ಗೊತ್ತಿಲ್ಲ. 1996 ರ ಕ್ರಯಪತ್ರವನ್ನು ಎಲ್ಲಿ ಯಾರು ಮಾಡಿದರು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಾನು ನನ್ನ ದೊಡ್ಡಪ್ಪ ರವರ ಸಹಿ ನೋಡಿರುವ ಕಾರಣ ನಕಲಾಗಿದೆ ಎಂದು ನನಗೆ ಅನುಮಾನ ಬಂತು. ನಿ ಪಿ 3 ರ ಆದಾರದ ಮೇಲೂ ಕ್ರಯಪತ್ರನಕಲು ಎಂದು ಹೇಳಿದ್ದೆನು. . 1996 ರ ಮೂಲ ಕ್ರಯಪತ್ರವನ್ನು ನಾನು ನೋಡಿಲ್ಲ ಎಂದರೆ ಸರಿ . ನಾನು ಸಹಿಗಳನ್ನು ಹೊಂದಾಣಿಕ ಮಾಡಿ ನೋಡಿರುವುದು ಹಾಗೂ ತಜ್ಞರ ಸಹಾಯ ಪಡೆದಿರುವುದು ದೃಢೀಕೃತ ಕ್ರಯಪತ್ರ ನಿ ಪಿ 2 ಆದಾರದ ಮೇಲೆ ಎಂದರೆ ಸರಿ .

ನಿ ಪಿ 2 ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೀಡಿರುವ ಒಂದು ಕಾಫಿ ಅಷ್ಟೇ ಎಂದರೆ ಮೂಲ ಪತ್ರ ಅಲ್ಲ ಎಂದರೆ ಸರಿ. ನಿ ಪಿ 2 ಮೂಲ ಕ್ರಯಪತ್ರದ ಜೆರಾಕ್ಸ್ ಪ್ರತಿ ಅಲ್ಲ ಎಂದರೆ ಸರಿಯಲ್ಲ. ನಿ ಪಿ 2 ರಲ್ಲಿ ಕ್ರಯಪತ್ರ ಮಾಡುವಾಗ ಎಷ್ಟು ರೂ ಸ್ಟಾಂಪ್ ಡ್ಯೂಟಿ ಕಟ್ಟಿದ್ದಾರೆ ಎಂದು ಮಾಹಿತಿ ಇಲ್ಲ ಎಂದರೆ ಸರಿ. ನಿ ಪಿ 2 ಮೂಲ ಕ್ರಯಪತ್ರದ ದೃಢೀಕರಣ ಅಲ್ಲದ ಸ್ಟಾಂಪ್ ಡ್ಯೂಟಿ ಬಗ್ಗೆ ಮಾಹಿತಿ ಸಿಗುತ್ತಿಲ್ಲ ನನಗೆ ಗೊತ್ತಿಲ್ಲ. ನಿ ಪಿ 2

ಕೊನೆಯ ಪುಟದಲ್ಲಿ ಮುದ್ರಣ ಮಾಡಿರುವ ಅಂಶವನ್ನು ಹೆೊರತು ಪಡಿಸಿದರೆ ಸ್ಟಾಂಪ್ ಡ್ಯೂಟಿ ಬಗ್ಗೆ ಮಾಹಿತಿ ಕ್ರಯಪತ್ರದಲ್ಲಿ ಇಲ್ಲ ಎಂದರೆ ಸರಿ. ಮಾಲ ಕ್ರಯಪತ್ರದಲ್ಲಿಸ್ಟಾಂಪ್ ಡ್ಯೂಟಿ ಬಗ್ಗೆ ಮಾಹಿತಿ ಕ್ರಯಪತ್ರದಲ್ಲಿಇರುತ್ತದೆ ಎಂದರೆ ಸರಿ. . ನಿ ಪಿ 2 ರಲ್ಲಿ ಇರುವ ಸಹಿಗಳು ನೋಂದಣಿ ಕಛೇರಿಯಲ್ಲಿ ನಕಲು ಮಾಡುವಾಗ ಬರೆದ ಸಹಿಗಳು ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ಮೂಲ ಕ್ರಯಪತ್ರ ಕ್ಕೂ ನಿ ಪಿ 2 ದಢೀಕೃತ ನಕಲಿಗೂ ಇರುವ ವ್ಯತ್ಯಾಸದ ಬಗ್ಗೆ ಸರಿಯಾದ ಮಾಹಿತಿ ಇಲ್ಲದ ಕಾರಣ ತಪ್ಪು ನಿರ್ದಾರದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ 148/2015 ಸಲ್ಲಿಸಿದ್ದು ಈಗ ಹೇಳುತ್ತಿರುವ ಕ್ರಯಪತ್ರದವಿಚಾರ ನನಗೆ ಮಾಹಿತಿ ಇತ್ತು ಎಂದರೆ ಸರಿ. ನಿ ಡಿ 1 ರಲ್ಲಿ ಪ್ಯಾರ 3 ರಲ್ಲಿ 03.04.1996 ಕ್ರಯಪತ್ರದ ಬಗ್ಗೆ ನಮೂದು ಮಾಡಿದ್ದೇನೆ ಎಂದರೆ ಸರಿ. ನಿ ಡಿ 1 ಪ್ರತಿವಾದಿಯವರು ಕೌಂಟರ್ ಕ್ಲೈಮ್ ಅಸಲು ದಾವೆ 148/15 ಸಲ್ಲಿಸಿದಾಗ ನನಗೆ 1996 ರ ಕ್ರಯಪತ್ರದಬಗ್ಗೆ ನನಗೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನಗೆ 1996 ರ ಕ್ರಯಪತ್ರದಬಗ್ಗೆ ಮಾಹಿತಿ ಇದ್ದು ಅಸಲು ದಾವೆ 148/15 ರಲ್ಲಿ ನಮೂದಿಸಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಜ್ಜ ಕೃಷ್ಣ ಮೂರ್ತಿ, ಶ್ಯಾಮರಾವ್, ನರಸಿಂಹ ಮೂರ್ತಿ ಅಣ್ಣ ತಮ್ಮಂದಿರು ಎಂದರೆ ಸರಿ. ಸದರಿ 3 ಜನರು 02.02.1966 ರಲ್ಲಿ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿ. ಕೃಷ್ಣ ಮೂರ್ತಿ ರವರಿಗ ಬಂದ ಆಸ್ತಿಯನ್ನು ಮಕ್ಕಳಾದ ಗೋಪಾಲ್ ರಾವ್, ಸೋಮಸುಂದರ್ ರಾವ್ , ಲಕ್ಷಣ ರಾವ್ ಹಾಗೂ ಗುಂಡುರಾವ್ ಅನುಭವಿಸಿರುತ್ತಾರೆ ಎಂದರೆ ಸರಿ. ಶ್ಯಾಮರಾವ್ ರವರಿಗೆ ಬಂದ ಒಂದನೇ ಮೂರು ಆಸ್ತಿಯಲ್ಲಿ ಅವರ ಮಕ್ಕಳಾದ ಗುಂಡುರಾವ್, ರಾಮಣ್ಣ, ಕೃಷ್ಣ ಮೂರ್ತಿ, ಸುಂದರ್ ರವರಿಗೆ ನೀಡಿದ್ದರು ಎಂದರೆ ಸಾಕ್ಷಿಯು ಗುಂಡುರಾವ್ ರವರಿಗೆ ಆಸ್ತಿ ನೋಡಿಕೊಳ್ಳಲು ಬಿಟ್ಟದ್ದರು ಆದರೆ ಆಸ್ತಿಯಲ್ಲಿ ಎಲ್ಲ ಮಕ್ಕಳಿಗೂ ಹಕ್ಕು ಇತ್ತು ಎನ್ನುತ್ತಾರೆ. ಶ್ಯಾಮರಾವ್ ರವರ ಮಕ್ಕಳು ದಿ. 03.08.1972 ರಲ್ಲಿ ನೊಂದಾಯಿತ ವಿಭಾಗ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ವಿಭಾಗದ ಬಗ್ಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ಯಾಮರಾವ್ ರವರು ಮಗ ಗುಂಡುರಾವ್ ರವರಿಗೆ 4 ಜನ ಮಕ್ಕಳು ಗುಂಡುರಾವ್ ರವರು ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತ ಮಡಿಕೇರಿಯಲ್ಲಿ ಇದ್ದರು ಎನ್ನುತ್ತಾರೆ. ಗುಂಡುರಾವ್ ಆಸ್ತಿ ನೋಡಿಕೊಳ್ಳುವ ಅನಾನುಕೂಲ ಇದ್ದ ಕಾರಣ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.